International Journal of Kannada Research
www.kannadajournal.com

ISSN: 2454–5813
IJKR 2019; 5(4): 149-151
© 2019 IJKR
www.kannadajournal.com
Received: 16-08-2019
Accepted: 18-09-2019

**ಪ್ರಿಯಾಂಕ.ಎಂ.ಜಿ**
ಸಂಶೋಧನ ವಿಧ್ಯಾರ್ಥಿ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

**Corresponding Author:**
**ಪ್ರಿಯಾಂಕ.ಎಂ.ಜಿ**
ಸಂಶೋಧನ ವಿಧ್ಯಾರ್ಥಿ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

# ಕುವೆಂಪು ಕಾದಂಬರಿಗಳಲ್ಲಿ ಮಲೆನಾಡ ವ್ಯವಸಾಯ ಆಚರಣೆ ಮತ್ತು ಸಂಪ್ರದಾಯಗಳ ಕುರಿತು

**ಪ್ರಿಯಾಂಕ.ಎಂ.ಜಿ**

ಪ್ರಾಚೀನ ಕಾಲದಿಂದಲೂ ಮನುಷ್ಯನು ಬೇಟೆ ಹಾಗೂ ಒಕ್ಕಲುತನ ಜೀವನೋಪಾಯ ಕಾರ್ಯಗಳ ಪೂರ್ವದಲ್ಲಿ ತನ್ನ ಹೊಟ್ಟೆ ಹಸಿವು ನೀಗಿಸಿಕೊಳ್ಳಲು ಗುಡ್ಡ ಬೆಟ್ಟಕಾಡು ಕಣಿವೆಗಳಲ್ಲಿ ಕಾಡು ಪ್ರಾಣಿಗಳೋಪಾದಿಯಲ್ಲಿ ಅಲೆದು ಹಣ್ಣು ಹಂಪಲು, ಗೆಡ್ಡೆ ಗೆಣಸು, ತೊಪ್ಪಲು ಪಲ್ಯಗಳನ್ನು ಸೇವಿಸುತ್ತಿದ್ದನು. ಆಹಾರದ ಇಂಥ ವಸ್ತುಗಳನ್ನು ಅಲೆದಾಡಿ ಒಂದೆಡೆ ಸಂಗ್ರಹಿಸಲು ಪ್ರಯತ್ನಿಸುತ್ತಿದ್ದನು. ಕಾಲಾನಂತರದಲ್ಲಿ ಆತನು ಬೇಟೆಗಿಳಿದು ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಿ ತಿಂದು ಬದುಕತೊಡಗಿದನು. ಪ್ರಾಣಿಗಳೊಂದಿಗೆ ಇಲ್ಲಿಂದ ಆತನಿಗೆ ಸಂಪರ್ಕ ಒದಗಿತು. ಈ ಸಂಪರ್ಕ ಸಂಬಂಧಗಳಿಂದಾಗಿ ಮುಂದೆ ಹಲವಾರು ಬೆಳೆವಣಿಗೆಗಳು ಕಾಣಿಸಿಕೊಂಡು, ಪ್ರಾಣಿಗಳ ಸಾಕಾಣಿಕೆ, ಕೃಷಿ, ಚರ್ಮಗಾರಿಕೆ ಇತ್ಯಾದಿ ಹುಟ್ಟಿಕೊಂಡವೆಂಬುದನ್ನು ಲಕ್ಷಿಸಬೇಕು. ಮನುಷ್ಯ ಒಂದೆಡೆ ನೆಲೆನಿಂತು ಕೃಷಿ ಬದುಕು ಸಾಗಿಸಲು ಪ್ರಾರಂಭಿಸಿದಾಗ ಕ್ರಮೇಣ ಬೇಟೆಯ ವೃತ್ತಿ ಕಡಿಮೆಯಾಗುತ್ತ ಬಂದಿತಲ್ಲದೆ, ಬೇಟೆ ಒಂದು ಕ್ರೀಡೆಯಾಗಿ, ಕಲೆಯಾಗಿ, ಹವ್ಯಾಸವಾಗಿ ಉಳಿದುಕೊಂಡು ಬಂದಿರುವುದನ್ನು ನಾವು ಕಾಣುತ್ತೇವೆ. ಬೆಟ್ಟ ಗುಡ್ಡಗಳ ಭವ್ಯವಾದ ಕಾಡಿನಿಂದ ಆವೃತವಾದ ಮಲೆನಾಡಿನ ಪ್ರದೇಶದ ನೂರಾರು ಬಗೆಯ ಪ್ರಾಣಿ ಪಕ್ಷಿಗಳಿಗೆ ನೆಲೆಬೀಡಾಗಿತ್ತು. ಹಾಗಾಗಿಯೇ ಮಲೆನಾಡಿನ ಜನರಿಗೆ ಬೇಟೆಯೆಂದರೆ ಒಂದು ಸಹಜ ವೃತ್ತಿಯಾಗಿತ್ತು.

ಮಲನಾಡಿನ ಭವ್ಯವಾದ ಪ್ರಕೃತಿಯ ಮಡಿಲಿನಲ್ಲಿ ಜನಿಸಿ ಬೆಳೆದ ಕುವೆಂಪು ಅವರು ಒಂದು ಹಂತದವರೆಗೆ ಬೇಟೆಯ ಹುಚ್ಚನ್ನು ಹಚ್ಚಿಕೊಂಡು ಪಳಗಿದವರು. ವಿವಿಧ ಬೇಟೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು. ಬೇಟೆಗಾರರ ಅನುಭವಗಳನ್ನು, ವಿವಿಧ ವಿಧಾನ ಪದ್ಧತಿಗಳನ್ನು ನೋಡಿ, ಕೇಳಿ ಬೆಳೆದವರು. ಹಾಗಾಗಿಯೇ ಕುವೆಂಪು ಅವರಲ್ಲಿ ಬೇಟೆಯ ಕುರಿತು ದಟ್ಟವಾದ ಅನುಭವವಿತ್ತು. ಅವರ ಅನುಭವವೇ ಅವರ ಎರಡೂ ಕಾದಂಬರಿಗಳಲ್ಲಿ ಸೂರ್ಯಗೊಂಡಿದೆ. ಈ ಕಾರಣಕ್ಕಾಗಿ ಅಧುನಿಕ ಕನ್ನಡ ಸಾಹಿತ್ಯದಲ್ಲಿ ಕುವೆಂಪು ಕಾದಂಬರಿಗಳು ವಿಪುಲವಾದ ಬೇಟೆಯ ಚಿತ್ರಣ ನೀಡುವ ಅಪರೂಪದ ಕೃತಿಗಳಾಗಿವೆ. ಅವರು ಚಿತ್ರಿಸುವ ಬೇಟೆಯ ವಿವರಣೆಯಲ್ಲಿ ಮಲನಾಡಿನ ಯಾವ ವರ್ಗದ ಜನರೂ ಅದನ್ನೊಂದು ವೃತ್ತಿಯನ್ನಾಗಿ ಸ್ವೀಕರಿಸಿ, ಕೇವಲ ಅದರ ಮೇಲೆ ಅವಲಂಬಿತವಾಗಿ ಬದುಕುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಕುವೆಂಪು ಅವರು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿರುವ ಹಾಗೆ ಅಂದು ಮಲೆನಾಡಿನಲ್ಲಿ ಬೇಟೆಯೇ ಜನರ ಮುಖ್ಯ ವೃತ್ತಿಯಾಗಿದ್ದು, ತದನಂತರ ಕಾಲಕ್ರಮೇಣ ಅದರ ಸ್ಥಾನವನ್ನು ಕೃಷಿ ಪಡೆದುಕೊಂಡಿರುವುದು ಕಂಡು ಬರುತ್ತದೆ. ಒಕ್ಕಲುತನವನ್ನೇ ಮುಖ್ಯ ವೃತ್ತಿಯನ್ನಾಗಿ ಅವಲಂಬಿಸಿ, ಬಿಡುವಿನ ಸಮಯದಲ್ಲಿ ಜನರು ಹವ್ಯಾಸವಾಗಿ ಬೇಟೆಯನ್ನು ಕೈಕೊಳ್ಳುವುದನ್ನು ಮತ್ತು ಆಗಾಗ್ಗೆ ಮಾಂಸಕ್ಕಾಗಿ ಬೇಟೆಯಾಡುವುದನ್ನು ಗಮನಿಸಿದರೆ ಈ ಮಾತು ಸ್ಪಷ್ಟವಾಗುತ್ತದೆ. ಜೊತೆಗೆ ಮಲೆನಾಡಿನಲ್ಲಿ ಕೃಷಿ ಯೋಗ್ಯ ಭೂಮಿ ಮೊದಲು ತುಂಬ ವಿರಳವಿತ್ತು. ನಾಗರೀಕತೆ ಬೆಳೆದಂತೆಲ್ಲ ಕಾಡನ್ನು ಕಡೆದು ಉಳುಮೆಗೆ ತೊಡಗಿದಂದಿನಿಂದ ಒಕ್ಕಲುತನ ಮುಂದಕ್ಕಾಗಿ ಬೇಟೆ ಹಿಂದೆ ಸರಿದಿದೆಯೆಂದೆನ್ನಬಹುದು. ಹೆಗ್ಗಾಡಿನ ದಟ್ಟನೆಯ ಮತ್ತು ಬಲಿಷ್ಟತೆಯನ್ನು ಎದುರಿಸಿ ಅಲ್ಲಿಯ ಜನ ಒಕ್ಕಲುತನಕ್ಕೆ ಯೋಗ್ಯವಾದ ಭೂಮಿಯನ್ನು ಸಿದ್ದಪಡಿಸಿಕೊಂಡು ತಮಗೆ ಅಗತ್ಯವಾದ ಬೆಳೆಯನ್ನು ಬೆಳೆಯಲಾರಂಭಿಸಿದರು.

ಮಲನಾಡಿನಲ್ಲಿ ಬಹುಸಂಖ್ಯಾತರಾಗಿದ್ದ ಒಕ್ಕಲಿಗರು ಜಮೀನ್ದಾರರಾಗಿದ್ದು ಒಕ್ಕಲುತನವು ಜೀವನ ಅವಲಂಬಿತವಾಗಿರುವುದನ್ನು ಕುವೆಂಪು ಕಾದಂಬರಿಗಳು ಸೂಚಿಸುತ್ತದೆ. ಹೀಗಾಗಿ ಭೂಮಿಯ

ಸಾಗುವಳಿ, ಕೃಷಿ ಕೆಲಸ ಕಾರ್ಯಗಳಿಗಾಗಿ ಪ್ರಾಣಿಗಳ ಬಳಕೆ ಮತ್ತು ಸಾಕಾಣಿಕೆ ವಿವಿಧ ಬೆಳೆಗಳು ಹಾಗೂ ಆಳುಗಳ ಹಗಲಿರುಳು ದುಡಿತ ಮತ್ತು ಬದುಕಿನ ಅವಲಂಬಿತ ಬಗೆಗೆ ಹೆಚ್ಚಿನ ವಿವರಣೆ ದೊರೆಯುತ್ತದೆ.

**ಭೂಮಿ ಸಾಗುವಳಿ**

ಕುವೆಂಪು ಕಾದಂಬರಿಗಳಲ್ಲಿ ಸಾಮಾನ್ಯವಾಗಿ ಒಕ್ಕಲಿಗರೇ ಭೂಸಾಗುವಳಿ ಮಾಡಿರುವುದು ಕಂಡು ಬಂದರೂ ಬ್ರಾಹ್ಮಣರೂ ಕ್ವಚಿತಾಗಿ ಹಳೆಪೈಕದವರು ಭೂಮಿ ಸಾಗುವಳಿ ಮಾಡಿರುವುದು ಉಲ್ಲೇಖಗೊಂಡಿದೆ. ಕಾನೂರಿನ ಚಂದ್ರಯ್ಯ ಗೌಡರ, ಶಾಮಯ್ಯ ಗೌಡರ, ಸೀತೆ ಮನೆಯ ಸಿಂಗಪ್ಪಗೌಡರ, ಸಿಂಬಾವಿ ಹೆಗ್ಗಡೆಯವರ, ಬೆಟ್ಟಳ್ಳಿ ದೇವಯ್ಯ ಗೌಡರ ಮುಂತಾದ ಮನೆತನಗಳು ಒಕ್ಕಲಿಗರ ಹೆಸರುವಾಸಿ ಭೂಸಾಗುವಳಿಯ ಮನೆತನಗಳು. ಕಲ್ಲೂರ ಮಂಜಭಟ್ಟರಂತ ಬ್ರಾಹ್ಮಣರು ತಲೆಮಾರುಗಳಿಂದ ಬಂದ ಪೂಜೆ–ಪುನಸ್ಕಾರಗಳ ಸಂಪ್ರದಾಯವನ್ನು ಮುಂದುವರೆಸುತ್ತ, ಭೂಮಿಯನ್ನು ಪಡೆದು ಸಾಗುವಳಿ ನೆಡೆಸುತ್ತಿದ್ದರು. ಆದರೆ ಭೂಮಿಯನ್ನು ಇತರರಿಂದ, ಒಕ್ಕಲುತನದಿಂದ ಸಾಗುವಳಿ ಮಾಡುತ್ತಿದ್ದರೆ ಹೊರತು ಭಟ್ಟರು ತಾವೇ ಗದ್ದೆಗಿಳಿದು ಬಿತ್ತಿ ಬೆಳೆಯುವ ರೈತಾಪಿ ವರ್ಗದವರಾಗಿರಲಿಲ್ಲ. ಹಳೆಪೈಕದವರಿಗೆ "ಸ್ವಂತ ಜಮೀನಿರುವುದು ಬಹಳ ಅಪೂರ್ವ, ಮಹಾ ಅನಾಚಾರವೆಂದೂ ಅನೇಕರ ಮನಸ್ಸು. ವೇದ ಕಲಿಯುವುದು ಶೂದ್ರರಿಗೆ ಹೇಗೆ ನಿಷಿದ್ದವೋ ಹಾಗೆಯೇ ಸ್ವಂತ ಜಮೀನು ಮಾಡುವುದು ಹಳಪೈಕದವರಿಗೆ ನಿಷಿದ್ದ."(ಮಲೆಗಳಲ್ಲಿ ಮದುಮಗಳು, ಪು.೮). ----- ಚೋಮನ ದುಡಿ

ಇಂಥ ಸಾಮಾಜಿಕ ಕಟ್ಟಪ್ಪಣೆ, ಬಹೀಷ್ಕಾರವಿರದಿದ್ದರೂ ಇವುಗಳನ್ನು ಮೀರಿ ಹಳೆಪೈಕದ ಸೇಸನಾಯ್ಕನಂತವರು ಒಂದಿಷ್ಟು ಸ್ವಂತ ಜಮೀನು ಹೊಂದಿ ಸಾಗುವಳಿ ಮಾಡುತ್ತಿದ್ದರು. ಕಾದಂಬರಿಗಳಲ್ಲಿ ಒಕ್ಕಲಿಗರು ಭೂಮಿಸಾಗುವಳಿ ತಲೆಮಾರುಗಳಿಂದ ಬಂದ 'ಕುಲಕಸುಬು' ಎಂದು ಬಗೆಯ ಅದೊಂದು ಪೂರ್ಣಾವಧಿಯ ವೃತ್ತಿಯಾನ್ನಾಗಿರಿಸಿಕೊಂಡಿರುವುದು ಕಂಡು ಬರುತ್ತದೆ.

**ಬೆಳೆಗಳು**

ಮಲೆನಾಡಿನ ಪ್ರಾಕೃತಿಕ ಲಕ್ಷಣಗಳಿಗೆ ಅನ್ವಯವಾಗಿ ಅಲ್ಲಿ ಬೆಳೆಯುತ್ತಿದ್ದ ಬೆಳೆಗಳು ವಿಶಿಷ್ಟವಾದವುಗಳು ಎಂಬುದು ಕುವೆಂಪು ಕಾದಂಬರಿಗಳಲ್ಲಿ ಹೆಚ್ಚಿನ ವಿವರಣೆ ದೊರೆಯುತ್ತದೆ. ದಟ್ಟವಾದ ಕಾಡುಪ್ರದೇಶ, ಸಮುದ್ರ ಮಟ್ಟದಿಂದ ಗಣನೀಯವಾಗಿ ಎತ್ತರದಲ್ಲಿರುವ ಕೃಷಿ ಭೂಮಿ, ಧಾರಕಾರವಾಗಿ ಸುರಿಯುತ್ತಿದ್ದ ಮಳೆ, ಆಹ್ಲಾದಕರವಾದ ತಂಪು ಹವಾಮಾನಗಳಿಂದಾಗಿ ಭತ್ತ, ಅಡಿಕೆಗಳಂತ ಪ್ರಮುಖವಾದ ಬೆಳೆಗಳನ್ನು ಬೆಳೆಯುತ್ತಿದ್ದರು ಎಂಬುದು ಕಾದಂಬರಿಗಳ ಮೂಲಕ ಬರುತ್ತದೆ.

ಪ್ರಾಣಿಗಳ ಸಾಗುವಳಿ:

ಕೃಷಿ ವ್ಯವಾಸಾಯವನ್ನೇ ಅವಲಂಬಿಸಿ ಮಲನಾಡಿನ ಜನರಿಗೆ ಪ್ರಾಣಿಗಳ ಸಾಕಾಣಿಕೆ ಅವರ ಬದುಕಿನ ಅವಿಭಾಜ್ಯ ಅಂಗವಾಗಿತ್ತು. "ಮೊದಮೊದಲು ಆಹಾರ ಸಂಪಾದನೆಗಾಗಿ ಕಾಡಿನ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದ ಮಾನವ ಆ ಪ್ರಾಣಿಗಳಲ್ಲಿ ಕೆಲವನ್ನು ಹಿಡಿದು ಪಳಗಿಸಿ ತನ್ನ ಪ್ರಯೋಜನಕ್ಕಾಗಿ ಸಾಕಲಾರಂಭಿಸಿದ ನಂತರ ಮಾನವ ಇತಿಹಾಸದಲ್ಲಿ ಹೊಸತೊಂದು ಬೆಳವಣಿಗೆ ಆರಂಭಗೊಂಡಿತೆಂದು ಹೇಳಬೇಕು. ಬರುಬರುತ್ತ ಅದು ಒಂದು ಉದ್ಯೋಗವಾಗಿ ಬೆಳೆಯಿತು. ಆಕಳು ಎಮ್ಮೆ ಎತ್ತು ಆಡು ಕುರಿ ಕೋಳಿ ನಾಯಿ ಹಂದಿಗಳನ್ನು ಮಲನಾಡಿನ ಜನರು ಸಾಕುತ್ತಿದ್ದರು".(ಗುರುಪಾದ ಮರಿಗುದ್ದಿ, ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಪು.೪೯)

ಪ್ರಾಣಿಗಳ ಬಳಕೆ ಮತ್ತು ಸಾಕಾಣಿಕೆಯ ಉದ್ದೇಶಗಳನ್ನು ಕುವೆಂಪು ಅವರು ಹೆಜ್ಜೆಹೆಜ್ಜೆಗೂ ಅವರು ವಿವರವಾಗಿ ಚಿತ್ರಿಸಿದ್ದಾರೆ. ಅದರೆ "ಅವರಲ್ಲಿ ಚಿತ್ರಿತವಾಗಿರುವ ಪ್ರಾಣಿಗಳು, ಮುಖ್ಯವಾಗಿ ಎರಡೂ ಕಾದಂಬರಿಗಳಲ್ಲಿ, ಕೃತಿಯ ಹೊರಮೈಯಾಗಿ ಎಳೆಯದೆ ಬಂಧದಲ್ಲಿ ಸಾವಯವತೆಯನ್ನು ಪಡೆಯುತ್ತವೆಯಾದ್ದರಿಂದ ಪ್ರಾಣಿಗಳ ಚಟುವಟಿಕೆಗಳಿಗೂ ಮತ್ತು ಬಂಧಕ್ಕು ಹೊಕ್ಕಳುಬಳ್ಳಿಯ ಸಂಬಂಧ ಏರ್ಪಡುತ್ತದೆ."(ಕೆ. ಶ್ರೀಕಂಠ ಕೂಡಿಗಿ : ಸಹ್ಯಾದ್ರಿ, ಪು.೧೧೩).

ಆಳುಗಳು:

ದೊಡ್ಡ ದೊಡ್ಡ ಜಮೀನ್ದಾರರು ಕೂಲಿ ಆಳುಗಳನ್ನು ಹೊಂದಿರದೇ 'ಕೃಷಿ' ಕಾರ್ಯಗಳಾಗಲಿ ಮನೆಕೆಲಸಗಳಾಗಲಿ ನಡೆಯುವಂತೇ ಇಲ್ಲ. ಇಂಥ ಜಮೀನ್ದಾರರ ಹೊಲಮನೆಗಳಲ್ಲಿ ದುಡಿಯದೇ ಇದ್ದರೆ ಕೂಲಿಕಾರರ ಜೀವನವೂ ಸಾಗುವಂತಿಲ್ಲ. ಹೀಗಾಗಿ ಈ ಇಬ್ಬರೂ ಪರಸ್ಪರ ಅವಲಂಬಿಗಳು. ಹೀಗಿದ್ದೂ ಕೂಲಿಕಾರರ ಶೋಷಣೆ ಅನುಭವಿಸಬೇಕಾಗುತ್ತದೆ. ವರ್ಗ, ವರ್ಣ ವ್ಯವಸ್ಥೆಗಳ ಅನುಷ್ಠಾನದ ಸಮಾಜದಲ್ಲಿ ಕೂಲಿಕಾರರ ಧಾರುಣ್ಯಸ್ಥಿತಿ ಹೆಚ್ಚಿನದು. ಬಡತನ, ಅಜ್ಞಾನಗಳನ್ನು ಬೆನ್ನಿಗೆ ಕಟ್ಟಿಕೊಂಡು ಹಗಲಿರುಳು ದುಡಿಯುವ ಮಲನಾಡಿನ ಆಳುಗಳನ್ನು ಕುರಿತು ಕುವೆಂಪು ಅವರು ತಮ್ಮ ಕಾದಂಬರಿಗಳಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಆಳುಗಳಿಂದ ಗೌಡರು ಹೆಗ್ಗಡತಿಯರೂ ಬಿಟ್ಟಿಕೆಲಸ ಮಾಡಿಸಿಕೊಳ್ಳುತ್ತಿದ್ದರು. ಬಿಟ್ಟಿ ಕೆಲಸದಲ್ಲಿ ಪಡಿ ಕೊಡುವ ವ್ಯವಸ್ಥೆ ಇರುವುದಿಲ್ಲ. ಈ ಕೆಲಸಕ್ಕೆ ಹೊತ್ತು ಗೊತ್ತು ಎಂಬುದೂ ಇರುವುದಿಲ್ಲ. ಕೆಲಸ ಹೇಳುವವರ ಹಾಗೂ ಮಾಡುವವರ ಮಧ್ಯ ಮಾನವ ಪ್ರೀತಿ ಹೆಚ್ಚು ಪಾತ್ರವಾಡುತ್ತದೆ. ಬಿಟ್ಟಿ ಕೆಲಸವನ್ನು ಒಡಯರೇ ಹೇಳುವುದರಿಂದ ಅಳುಗಳು ತಿರಸ್ಕರಿಸಲಿಕ್ಕೆ ಸಾಧ್ಯವಾಗದೆ ಔದಾರ್ಯಕ್ಕೆ ಒಳಗಾಗಿ ನಿರ್ವಹಿಸಬೇಕಾಗುತ್ತದೆ. ಕೆಲಸ ಆದ ನಂತರ ಮನೆಯಲ್ಲಿ ಉಳಿದ ತಂಗಳು ಆಹಾರ ನೀಡಿ ಆಳುಗಳನ್ನು ಒಡೆಯರು ಸಂತೈಸುತ್ತಿದ್ದರು. ಗುತ್ತಿ ಸಿಂಬಾವಿಗೆ ಹೋಗಬೇಕಾದರೆ ಭರಮೈ ಹೆಗ್ಗಡೆಯವರ ಹೆಂಡತಿ ಜಟ್ಟಮ್ಮ ಹೆಗ್ಗತಿಯವರಿಗೆ ತಿಳಿಸಿ, ತಂಗಳನ್ನ ಮಜ್ಜಿಗೆ ಉಪ್ಪಿನಕಾಯಿಗಳನ್ನು ಕಾಣಿಕೆಯಾಗಿ ಪಡೆದು, ಬಿಡಾರಕ್ಕೆ ಹಿಂತಿರುಗುವನು. (ಮಲೆಗಳಲ್ಲಿ ಮದುಮಗಳು, ಪು.೩೪೭) ಐತನ ಹೆಂಡತಿ ಪೀಂಚಲಿ ಕೋಣೂರಿನ ಮುಕುಂದಯ್ಯ ಹಾಗೂ ಹೂವಳ್ಳಿಯ ಚಿನ್ನಮ್ಮರ ಮಧ್ಯ ಪ್ರೇಮ–ಮದುವೆ ಕುರಿತು ಮಧ್ಯಸ್ಥಿಕೆಯ ಕೆಲಸ ಮಾಡಿ ಚಿನ್ನಮ್ಮನಿಂದ ಬಾಡ, ತಂಗಳನ್ನ, ಸೀರೆಯಂತ ವಸ್ತುಗಳನ್ನು ಪ್ರೀತಿಯ ಕಾಣಿಕೆಯಂದು ಪಡೆದುಕೊಂಡು ಮನೆಗೆ ಬರುತ್ತಾಳೆ.

ಈ ತರನಾಗಿ ಮಲೆನಾಡಿನಲ್ಲಿ ಆಳುಗಳು ಒಡೆಯರಿಂದ ಚಿತ್ರಹಿಂಸೆ, ಅನ್ಯಾಯಗಳನ್ನು ಅನುಭವಿಸಿ ಬದುಕುವ ಇನ್ನೊಂದು ದಾರಿ ಕಾಣದೆ, ಒಡೆಯರಿಗೆ ಅಧೀನವಾಗಿಯೇ ಸಾಲಶೂಲದಲ್ಲಿ ಮುಳುಗುತ್ತ ಬದುಕುವುದು ಅನಿವಾರ್ಯವಾಗಿತ್ತು. ಹೂವಯ್ಯ, ರಾಮಯ್ಯ, ಮುಕುಂದಯ್ಯನಂಥ ಅನುಕಂಪವುಳ್ಳ ಒಡೆಯರಿಂದ ಆಳುಗಳು ದುಡಿಮೆಯ ಮನಸ್ಥಿತಿಯಲ್ಲಿ ಹಾಗೂ ಬದುಕಿನಲ್ಲಿ ಒಂದಿಷ್ಟು ಚೈತನ್ಯ ಮೂಡುತ್ತಿತ್ತು.

ಭೂಮಿ ಸಾಗುವಳಿ, ಪ್ರಾಣಿಗಳ ಬಳಕೆ – ಸಾಕಾಣಿಕೆ ಹಾಗೂ ದುಡಿತ, ಸಂಬಳ, ದಾರಿದ್ರ್ಯಗಳ ಕುರಿತಾಗಿ ಕುವೆಂಪು ಚಿತ್ರಿಸಿದ ಸಂಗತಿಗಳು, ಮಲೆನಾಡಿನ ಜಮೀನ್ದಾರರ ಹಾಗೂ ಕೂಲಿಕಾರರಲ್ಲಿ ಎಷ್ಟೇ ಅಂತರ ಭಿನ್ನತೆಗಳಿದ್ದರೂ ಕೃಷಿಯನ್ನೇ ಸಂಪೂರ್ಣ ವೃತ್ತಿಯನ್ನಾಗಿ ಅವಲಂಬಿತವಾದ ಬದುಕು ಪರಸ್ಪರ ಅವಲಂಬಿತ ಹಾಗೂ ಒಮ್ಮತದಿಂದ ಕೂಡಿಕೊಂಡಿರುವಂಥದ್ದು ಎಂಬುದು ತಿಳಿದು ಬರುತ್ತದೆ. ಪ್ರಾಣಿಗಳು ಕೃಷಿ ಅವಲಂಬಿತ ಬದಿಕಿಗೆ ಸೇತುವೆ ನಿರ್ಮಿಸಿದೆ.

**ಮಲೆನಾಡಿನ ಸಾಂಪ್ರದಾಯಿಕ ಆಚರಣೆಗಳು**

ರೈತರು ನೆಲಕ್ಕೆ ಬೀಜ ಬಿತ್ತುವುದರಿಂದ ಹಾಗೂ ಸಸಿ ಮಡಿ ಹಾಕುವುದರರಿಂದ ಮೊದಲುಗೊಂಡು ಬೆಳೆ ಕುಯಿಲಾಗುವ ತನಕ ಹೊಲದಲ್ಲಿ ವಿವಿಧ ರೀತಿಯ ಬೆಳೆ ಸಂಬಂಧಿ ಆಚರಣೆಗಳನ್ನು ನೆರವೇರಿಸುತ್ತಾರೆ. ಬೆಳೆಯ ವಿವಿಧ ಹಂತಗಳಲ್ಲಿ ಇವು ಜರುಗುತ್ತವೆ. ಇವುಗಳ ಉದ್ದೇಶ ಸ್ಪಷ್ಟ, ಮಾಡಿದ ಕೈ ಹತ್ತಲಿ, ಬಿತ್ತಿದ ಬೀಜ ಮೊಳೆಯಲು ಯಾವುದೇ ಆತಂಕ ಅಡ್ಡಿಯಾಗದಿರಲಿ ಬೆಳೆದ ಪೈರಿಗೆ ಕೀಟ ರೋಗಾದಿಗಳ ಬಾಧೆ ತಗುಲದಿರಲಿ, ಅದರ ಹಸುರಿಗೆ ಕಣ್ಣೆಸರು ತಾಗದಿರಲಿ ಮುಂತಾದ ಕಾರಣಗಳಿಂದ ಇವುಗಳನ್ನು ಆಚರಿಸಲಾಗುತ್ತದೆ.

**ಆರಿದ್ರಾ ಮಳೆ ಹಬ್ಬ**

ಮಲೆನಾಡಿನ ರೈತಾಪಿ ವರ್ಗದಲ್ಲಿ ಆರಿದ್ರಾ ಮಳೆ ಅವಧಿಯಲ್ಲಿ ಪ್ರಕೃತಿಯ ಅಗೋಚರ ಶಕ್ತಿಗಳಿಗೆ ಪೂಜೆ ಸಲ್ಲಿಸುವ ರೂಢಿಯಿದೆ. ಕೆಲವು ಜನಾಂಗದಲ್ಲಿ **ಆರಿದ್ರಾ ಮಳೆ ಹಬ್ಬ** ಕೌಟುಂಬಿಕ ಆಚರಣೆಯಾಗಿದ್ದರೂ ಹೆಚ್ಚಿನ ಕಡೆ ಊರೊಟ್ಟಿನ ಹಬ್ಬವಾಗಿ ಆಚರಣೆಗೊಳ್ಳುತ್ತಿದೆ. ಕೃಷಿ ಕಾಯಕವೇ ಜೀವನ ಮಾರ್ಗವಾಗಿರುವ ದೀವರು ಜನಾಂಗದಲ್ಲಿ ಈ ಹಬ್ಬ ವಿಶಿಷ್ಟ. ಒಕ್ಕಲಿನ ನಂತರ ಗದ್ದೆ ಹೂಡುವುದು, ಹೆಂಡೆ ಒಡೆಯುವುದು, ಗೊಬ್ಬರ ಬೀರುವುದು, ಬೀಜ ಬಿತ್ತುವುದು, ಹರಗುವುದು, ಆಲ ಹೊಡೆಯುವುದು, ಕಳೆ ತೆಗೆಯುವುದು ಮೊದಲಾದ ಒಂದಲ್ಲಾ ಒಂದು ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಳ್ಳುತ್ತಾರೆ. ಗೇಣಿ ರೈತರಾಗಿ ಕುಟುಂಬದ ಸದಸ್ಯರೆಲ್ಲಾ ಕೃಷಿ ಕಾರ್ಯದಲ್ಲಿ ವರ್ಷಾವಧಿ ತೊಡಗಿಕೊಳ್ಳಬೇಕಾದ ಅನಿವಾರ್ಯತೆಗೊಳಗಾಗಿದ್ದ ಈ ಜನಾಂಗಕ್ಕೆ ಕೃಷಿ ಬದುಕಿನ ಏಕತಾನತೆ ಕೊನೆಗೊಳಿಸುವ ಹಬ್ಬ ಅತ್ಯಂತ ದುಬಾರಿ ಖರ್ಚಿನದ್ದಾಗಿದೆ. ಈ ಹಬ್ಬದಲ್ಲಿ ಭೂತ, ಚೌಡಿ ಮೊದಲಾದ ಶಕ್ತಿಗಳಿಗೆ ಕುರಿ, ಕೋಳಿ ಬಲಿ ನಿಡುವ ಪದ್ಧತಿ ಇದೆ.

**ಬಲೀಂದ್ರ ಪೂಜೆ (ದೀಪಾವಳಿ)**

ಮತ್ತೊಂದು ಮಲೆನಾಡಿನ ಆಚರಣೆಯೆಂದರೆ ಬಲೀಂದ್ರ ಪೂಜೆ ಪ್ರಾಯಶಃ ಕೃಷಿ ಭೂಮಿ ಇರುವ ಎಲ್ಲ ಕಡೆಗಳಲ್ಲು ಇರುವ ಸಂಪ್ರದಾಯವಾಗಿದೆ. ಕಾರ್ತಿಕ ಪಾಡ್ಯದಂದು ಗದ್ದೆಗಳಲ್ಲಿ ದೀಪ ಹಚ್ಚಿ, ಬಲೀಂದ್ರನ ಕುರಿತು ಹೇಳುವ ನುಡಿಗಟ್ಟು ಕೂಡ ಸೊಗಸಾರುತ್ತದೆ. ತದನಂತರ ಬಲೀಂದ್ರನನ್ನು ಕಳುಹಿಸಿಕೊಟ್ಟ ನಂತರ ಹೇಳೋ ಮಾತುಗಳು ನಿಜಕ್ಕೂ ಮಾರ್ಮಿಕವಾಗಿದೆ.

> "ಹಬ್ಬ ಹಬ್ಬ ಮಲ್ಲಣ್ಣಾ
> ಹಬ್ಬಕ್ ಮೂರ್ ಹೋಳಿಗೇ
> ಹಬ್ಬ ಕಳ್ದಿದ್ ಮರುದಿವ್ಸಾ
> ರಾಗೀ ರಬ್ಬಳಿಗೇ" (ಅರಳಿ ಮರ)

ಹಬ್ಬದ ಆಚರಣೆಯ ಸುಖ, ಆ ಎರಡು ಮೂರು ದಿನಗಳು ಮಾತ್ರ. ಹಬ್ಬ ಮುಗಿದ ಮಾರನೇ ದಿನದಿಂದ ಮತ್ತೆ ರಾಗಿ ರಬ್ಬಳಿಗೆಯೇ ಗತಿ ಎನ್ನುವಲ್ಲಿ, ಬಡತನದ ಅಸಾಹಾಯಕತೆ ಎಷ್ಟು ಚೆನ್ನಾಗಿ ಚಿತ್ರಿತವಾಗಿದೆ. ತಮ್ಮನ್ನು ತಾವೇ ವ್ಯಂಗ್ಯವಾಡಿಕೊಂಡು, ಹಬ್ಬದಾಚರಣೆಯ ನಂತರದ ದಿನಗಳಿಗೆ ತಮ್ಮನ್ನು ತಾವು ಸಿದ್ಧಪಡಿಸಿಕೊಳ್ಳುವ ರೀತಿ, ಅವರುಗಳು ಬದುಕನ್ನು ಸ್ವೀಕರಿಸಿದ ರೀತಿಗೆ ಕನ್ನಡಿ ಹಿಡಿಯುತ್ತದೆ.

ಕಾರಬ್ಬ:

ಈ ಹಬ್ಬ ರೈತಾಪಿಗಳಲ್ಲಿ ಆಚರಿಸಲ್ಪಡುವ ಬಹುಮುಖ್ಯವಾದ ಆಚರಣೆ. ಇದು ತುಂಬಾ ಸರಳವಾಗಿ ಆಚರಿಸಲ್ಪಡುವ ಕ್ರಿಯೆ. ಆದರೆ ಈ ಆಚರಣೆಯೇ ನಿರ್ದಿಷ್ಟ ವರ್ಷದ ಬೇಸಾಯದ ಕೆಲಸಗಳಿಗೆ ಮುನ್ನುಡಿ. ಗೊಲ್ಲ ಸಮುದಾಯಗಳಲ್ಲಿ ವಿಶೇಷವಾಗಿ ಕಾಣಬಹುದು. ಸಾಮಾನ್ಯವಾಗಿ ಮೃಗಶಿರ, ಆರಿದ್ರಾ ಮಳೆಗಳ ಸಂದರ್ಭದಲ್ಲಿ ಕಾರಬ್ಬವನ್ನು ಆಚರಿಸಲಾಗುತ್ತದೆ. ರಾಗಿ ಅಥವಾ ಭತ್ತದ ಸಸಿ ಮಡಿ (ಒಟ್ಟು ಬಿಡುವುದು) ಹಾಕುವ ಮುನ್ನ ಇದನ್ನು ಆಚರಿಸುವುದು ವಾಡಿಕೆ.

**ಕೂರಿಗೆ ಪೂಜೆ**

ಕೂರಿಗೆಯು ಬೀಜ ಬಿತ್ತನೆಗೆ ಬಳಸುವ ಪ್ರಮುಖ ಉಪಕರಣ. ರಾಗಿ, ಜೋಳ, ಅಕ್ಕಡಿ ಕಾಳುಗಳು ಮುಂತಾದವುಗಳನ್ನು ಸಾಲು ಬಿತ್ತನೆ ಮಾಡಲು ಕೂರಿಗೆಯನ್ನು ಬಳಸುತ್ತಾರೆ, ಇದು ಮುಖ್ಯವಾಗಿ ದಕ್ಷಿಣ ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ಮುಖ್ಯವಾಗಿ ಮಲೆನಾಡಿನಲ್ಲಿಯೂ ಚಾಲ್ತಿಯಲ್ಲಿದೆ. ಐದು ಮತ್ತು ಏಳು ತಾಳುಗಳುಳ್ಳ, ಅಂದರೆ ಐದು ಮತ್ತು ಏಳು ಸಾಲು ಬಿತ್ತುವ ಕೂರಿಗೆಗಳಿವೆ, ಕೂರಿಗೆಯ ದಿಂಡನ್ನು ಗಟ್ಟಿ ಮರದಲ್ಲಿ ಮಾಡಿದ್ದರೆ ಕೊಳವೆಗಳನ್ನು ಬಿದಿರಿನಲ್ಲಿ ಮಾಡಿರುತ್ತಾರೆ.

ಧಾರ್ಮಿಕ ಆಚರಣೆ ಸೀಮಿತ:

ಭೂ ಸುಧಾರಣೆ ನಂತರದ ಬದಲಾದ ಕಾಲಘಟ್ಟದಲ್ಲಿ ಮೌಢ್ಯಾಚರಣೆಯಿಂದ ದೂರ ಸರಿಯುತ್ತಿದ್ದಾರೆ. ಆರ್ಥಿಕ ಸದೃಢತೆ ಈಗ ಎಲ್ಲರ ಕನಸಾಗಿದ್ದು, ದುಂದು ವೆಚ್ಚಕ್ಕೆ ಕಡಿವಾಣ ಹಾಕುವ ಪ್ರಯತ್ನ ಹಳ್ಳಿಗಳಲ್ಲಿ ಫಲ ಪ್ರದವಾಗುತ್ತಿದೆ. ಹಬ್ಬದ ಸರಳಾಚರಣೆ ಸ್ವಾಗತಾರ್ಹವಾಗಿದ್ದು, ಎಲ್ಲರ ಸರ್ವತೋಮುಖ ಅಭಿವೃದ್ಧಿಗೆ ದುಂದುವೆಚ್ಚ ತಡೆಯಾಗಿದೆ. ಆಚರಣೆ, ಸಂಪ್ರದಾಯ, ನಂಬಿಕೆಗಳಿಗಿಂತ ಮಿಗಿಲಾದದ್ದು ದುಡಿಮೆ.

ಇದಕ್ಕೆ ಕುವೆಂಪು ಹೇಳುವಂತೆ ಅವರ 'ನೇಗಿಲ ಯೋಗಿ' ಕವನದಂತೆ, ಯಾರು ಅರಿಯದ ನೇಗಿಲ ಯೋಗಿಯು ಲೋಕಕೆ ಅನ್ನವನೀಯುವವನು. ಹೆಸರನು ಬಯಸದೆ ಅತಿಸುಖ ಗಳಿಸದೆ ದುಡಿವನು ಗೌರವಕಾಶಿಸದೆ. ಕಷ್ಟದೊಳನ್ನವ ದುಡಿವನೆ ತ್ಯಾಗಿ, ಸೃಷ್ಟಿನಿಯಮದೊಳಗವನೆ ಭೋಗಿ. ಮುತ್ತಿಗೆ ಹಾಕಲಿ ಸೈನಿಕರೆಲ್ಲ, ಬಿತ್ತುಳುವುದನವ ಬಿಡುವುದೇ ಇಲ್ಲ. ನೇಗಿಲ ಕುಲದೊಳಗಡಗಿದೆ ಕರ್ಮ, ನೇಗಿಲ ಮೇಲೆಯೇ ನಿಂತಿದೆ ಧರ್ಮ. ಈ ಹಾಡಿನಲ್ಲಿ ಇರುವ ಮೂರು ಚರಣಗಳು ಅದ್ಭುತ ಸಾಲುಗಳಿಂದ ಅಂತ್ಯಗೊಳ್ಳುತ್ತವೆ. ಈ ಮೂರು ಸಾಲುಗಳು ಈ ಹಾಡಿನ ಜೀವ ತಂತಿಗಳು.

**ಪರಾಮರ್ಶನ ಗ್ರಂಥಗಳು**

1. ಮಲೆಗಳಲ್ಲಿ ಮದುಮಗಳು – ಕುವೆಂಪು
2. ಕಾನೂರು ಹೆಗ್ಗಡತಿ – ಕುವೆಂಪು
3. ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ – ಗುರುಪಾದ ಮರಿಗುದ್ದಿ
4. ಸಹ್ಯಾದ್ರಿ – ಕೆ. ಶ್ರೀಕಂಠ ಕೂಡಿಗಿ